**ಓ.ಎಸ್. ನಂಃ 320/2023**

**ಪಿ. ಡಬ್ಲ್ಯೂಃ 2**

**ದಿನಾಂಕ 13.03.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿಯ ಪರ ಸರಕಾರಿ ವಕೀಲರಿಂದಃ</u>**

1.ನನ್ನ ತಂದೆಯ ಹೆಸರು ಎ.ಪಿ. ಚಂದ್ರಪ್ಪ ಅಂತ ಇದ್ದು, ನನ್ನ ತಾತನ ಹೆಸರು ಪುಟ್ಟಸ್ವಾಮಯ್ಯ ಅಂತ ಇರುತ್ತದೆ. ನನ್ನನ್ನು ದಾವಾ ಬಿ ಅನುಸೂಚಿ ಆಸ್ತಿಯ ಮಾಲೀಕ ಎಂದು ಘೋಷಿಸುವಂತೆ ಕೋರಿ ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. 1938 ರಿಂದಲೂ ನಮ್ಮ ಹಿರಿಯರು ಮತ್ತು ನಾವು ದಾವಾ ಆಸ್ತಿಗಳ ಸ್ವಾಧೀನದಲ್ಲಿದ್ದೇವೆ.

2. ದಾವಾ ಆಸ್ತಿಗಳನ್ನು ನನಗೆ 1938 ರಲ್ಲಿ  ನನ್ನ ತಾತನಾದ ಪುಟ್ಟಸ್ವಾಮಪ್ಪರವರು ಖರೀದಿಸಿರುತ್ತಾರೆ. ನಾವು ದಾವಾ ಆಸ್ತಿಗಳ ಸ್ವಾಧೀನದಲ್ಲಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ದಾವಾ ಆಸ್ತಿಗಳ ಖಾತೆಯನ್ನು ನಮ್ಮ ಹೆಸರಿಗೆ ವರ್ಗಾಯಿಸುವಂತೆ ಕೋರಿ ತಹಸೀಲ್ದಾರ್‌ರವರಿಗೆ ನಾವು ಅರ್ಜಿಯನ್ನು ಸಲ್ಲಿಸಿರುವುದಿಲ್ಲ.

3. ದಾವಾ ಆಸ್ತಿಗಳನ್ನು ನನ್ನ ತಾತ ಖರೀದಿಸಿದ ನಂತರ ದಾವಾ ಆಸ್ತಿಗಳ ಕಂದಾಯ ದಾಖಲೆಗಳಾದ ಖೇತುವಾರು ಮತ್ತು ನಮೂನೆ-5 ಮತ್ತು 6 ರಲ್ಲಿ ನನ್ನ ತಾತನ ಹೆಸರು ನಮೂದಾಗಿರುತ್ತದೆ. ನನ್ನ ತಾತನ ಹೆಸರಿನಿಂದ ದಾವಾ ಆಸ್ತಿಗಳನ್ನು ನಮ್ಮ ಹೆಸರಿಗೆ ನಾವು ಪೌತಿ ಖಾತೆ ಮಾಡಿಸಿಕೊಂಡಿರುವುದಿಲ್ಲ. ದಾವಾ ಆಸ್ತಿಗಳು ಎಂದಿಗೂ ಸಹ ನನ್ನ ತಾತ, ತಂದೆ ಹಾಗೂ ನಮ್ಮ ಹೆಸರಿನಲ್ಲಿ ಇರಲಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ.

4. ಮಾರಗೌಡನಹಳ್ಳಿಯ ಸರ್ವೇ ನಂಬರ್ 113/3 ರಲ್ಲಿ ಒಟ್ಟು 2 ಎಕರೆ 11 ಗುಂಟೆ ಜಮೀನು ಇದೆ ಎಂದರೆ ಸರಿ. ಸರ್ವೇ ನಂಬರ್ 113/3 ರ 2 ಎಕರೆ 11 ಗುಂಟೆ ಜಮೀನಿನ ಪೈಕಿ ಬೋರಯ್ಯ ಬಿನ್ ಕುಳ್ಳಯ್ಯ ರವರಿಗೆ 26 ಗುಂಟೆ ಜಮೀನು,

ರಾಜಮ್ಮ ಕೋಂ.ಲಕ್ಕಯ್ಯ ರವರಿಗೆ 25 ಗುಂಟೆ ಜಮೀನು ಹಾಗೂ 1 ಎಕರೆ ಸರಕಾರಿ ಜಮೀನು ಇದೆ ಎಂದರೆ ಸರಿ. ಮಾರಗೌಡನಹಳ್ಳಿಯ ಸರ್ವೇ ನಂಬರ್ 113/3 ರಲ್ಲಿ ನಮಗೆ ಯಾವುದೇ ಜಮೀನು ಇರದಿದ್ದರು ಸಹ ಸರಕಾರಿ ಜಮೀನನ್ನು ಕಬಳಿಸುವ ಉದ್ದೇಶದಿಂದ ನಾವು ಈ ಸುಳ್ಳು ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 1938 ರಿಂದಲೂ ನಮ್ಮ ಹಿರಿಯರು ಮತ್ತು ನಾವು ದಾವಾ ಆಸ್ತಿಗಳ ಸ್ವಾಧೀನದಲ್ಲಿದ್ದೇವೆ ಎಂದು ಸ್ವತಃ ನುಡಿದಿರುತ್ತಾರೆ.

5. ದಾವಾ ಆಸ್ತಿಗಳ ಖಾತೆಯನ್ನು ನಮ್ಮ ಹೆಸರಿಗೆ ವರ್ಗಾಯಿಸುವಂತೆ ಕೋರಿ ತಹಸೀಲ್ದಾರ್ರವರಿಗೆ ನಾವು ಸಲ್ಲಿಸಿದ ಅರ್ಜಿಗೆ ತಹಸೀಲ್ದಾರ್ ರವರು ನಮಗೆ ಕ್ರಯಕ್ಕೆ ಕೊಟ್ಟ ಮಾರಾಟಗಾರನ ಹೆಸರಿನಲ್ಲಿಯೇ ದಾವಾ ಆಸ್ತಿಗಳ ಪಹಣಿ ಇರದಿದ್ದ ಕಾರಣ ಕ್ರಯ ಪತ್ರದ ಆಧಾರದ ಮೇರೆಗೆ ದಾವಾ ಆಸ್ತಿಗಳ ಪಹಣಿಗಳನ್ನು ನಮ್ಮ ಹೆಸರಿಗೆ ವರ್ಗಾವಣೆ ಮಾಡಲು ಆಗುವುದಿಲ್ಲ ಎಂದು ದಿನಾಂಕ 06.04.2023 ರಂದು ತಹಸೀಲ್ದಾರ್ ರವರು ನಮಗೆ ನಿಡಿ.1 ರ ಹಿಂಬರಹವನ್ನು ನೀಡಿರುತ್ತಾರೆ ಎಂದರೆ ಸರಿ.

6. ನನ್ನ ತಾತನ ಕಾಲದಿಂದಲೂ ಸಹ ನಾವು ದಾವಾ ಆಸ್ತಿಗಳಿಗೆ ಕಂದಾಯ ಕಟ್ಟುತ್ತಾ ಬಂದಿರುತ್ತೇವೆ ಹಾಗೂ ಅದರ ಸಂಬಂಧ ಕಂದಾಯ ರಸೀದಿಗಳನ್ನು ಸಹ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿಗಳನ್ನು ಎಂದಿಗೂ ಸಹ ನನ್ನ ತಾತನವರು ಖರೀದಿಸದಿದ್ದರು ಸಹ ಹಾಗೂ ನಾವು ಎಂದಿಗೂ ಸಹ ದಾವಾ ಆಸ್ತಿಯ ಸ್ವಾಧೀನದಲ್ಲಿ ಇಲ್ಲದಿದ್ದರು ಸಹ ಸುಳ್ಳು ಕ್ರಯ ಪತ್ರಗಳನ್ನು ಸೃಷ್ಟಿಸಿ ಸರಕಾರಿ ಜಮೀನನ್ನು ಕಬಳಿಸುವ ಉದ್ದೇಶದಿಂದ ನಾವು ಈ ಸುಳ್ಳು ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ. ನಾವಾಗಲೀ ಅಥವಾ ನಮ್ಮ ಹಿರಿಯರಾಗಲೀ ದಾವಾ ಆಸ್ತಿಗಳ ಸಂಬಂಧ ಎಂದಿಗೂ ಕಂದಾಯವನ್ನು ಕಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

7. ಹಿಂದಿನಿಂದಲೂ ಇಂದಿನವರೆಗೂ ದಾವಾ ಆಸ್ತಿಗಳು ಸರಕಾರದ ಹೆಸರಿನಲ್ಲಿಯೇ ಇರುತ್ತದೆ ವಿನಹಃ ದಾವಾ ಆಸ್ತಿಗಳು ನಮ್ಮ ಹೆಸರಿನಲ್ಲಿದ್ದಾಗಲೀ ಅಥವಾ ನಮಗೆ ಮಾರಾಟ ಮಾಡಿದ ಪುಟ್ಟಪ್ಪ ಬಿನ್ ದ್ಯಾವಣ್ಣ ರವರ ಹೆಸರಿನಲ್ಲಿ ಎಂದೂ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಸರಕಾರಿ ಜಮೀನುಗಳಾಗಿದ್ದು, ದಾವಾ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ನಾವು ಈ ಸುಳ್ಳು ದಾವೆಯನ್ನು ಹೂಡಿರುತ್ತೇವೆ

ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಸರಕಾರಕ್ಕೆ ಸೇರಿರುವ ಆಸ್ತಿಗಳಾಗಿರುವ ಕಾರಣ ಸದರಿ ಆಸ್ತಿಗಳು ಎಂದಿಗೂ ಸಹ ನಮ್ಮ ಹೆಸರಿನಲ್ಲಿರಲಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**